ನೇಮಕಾತಿ ಆದೇಶವನ್ನು ನೀಡುವಾಗ ಖಾಲಿ ಇರುವ ಹುದ್ದೆಗಳನ್ನು ಆದ್ಯತೆಯ ಮೇರೆಗೆ ಭರ್ತಿ ಮಾಡಲಾಗುವುದು.

ಇ) ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವಾಗ ಆಯಾ ಜಿಲ್ಲೆಯವರಿಗೆ (ಸ್ಥಳೀಯರಿಗೆ) ಆದ್ಯತೆ ಮೇಲೆ ಮೆರಿಟ್ ಮತ್ತು ಮೀಸಲಾತಿ ಪದ್ಧತಿ ಅನುಸರಿಸಿ ನೇಮಕ ಮಾಡಲಾಗುವುದು.

## ವೈದ್ಯಕೀಯ ಶಿಕ್ಷಣಕ್ಕಾಗಿ ಸರ್ಕಾರಿ ಆಸ್ಪತ್ರೆ ಸೌಲಭ್ಯ ನೀಡಿದ್ದಕ್ಕೆ ಬರಬೇಕಾದ ಬಾಕಿಯ ಬಗ್ಗೆ

**1935:** ಶ್ರೀ ಜಿ.ಎಸ್. ಆಚಾರ್ (ಬೈಂದೂರ್):–

ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಧಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಯಾವ ಯಾವ ಖಾಸಗಿ ಮೆಡಿಕಲ್ ಕಾಲೇಜುಗಳಿಗೆ ಎಲ್ಲೆಲ್ಲಿ ವೈದ್ಯಕೀಯ ಶಿಕ್ಷಣ ಸೌಲಭ್ಯಗಳನ್ನು ಒದಗಿಸಲಾಗಿದೆ;

ಆ) ಈ ಸಲುವಾಗಿ ಸದರಿ ಸಂಸ್ಥೆಗಳಿಂದ ಸರ್ಕಾರಕ್ಕೆ ಎಷ್ಟು ಹಣ ಬರಲು ಬಾಕಿ ಇದೆ;

ಇ) ಸದರಿ ಸವಲತ್ತು ಅನಿರ್ದಿಷ್ಟವಾಗಿ ಮುಂದುವರಿಯುವುದೆ;

ಈ) ಖಾಸಗಿಯವರ ಸೂತ್ರಗಳ ಆಧಾರದ ಮೇಲೆ ಸರ್ಕಾರವೇ ಲಾಭದಾಯಕವಾಗಿ ಮೆಡಿಕಲ್ ಕಾಲೇಜುಗಳನ್ನು ಆರಂಭಿಸುವ ಯೋಜನೆ ಇದೆಯೇ ?

ಶ್ರೀ ಜಿ.ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು):–

ಅ) ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಆ) ದಿನಾಂಕ 10–4–1992ರಂದು ಅನ್ವಯವಾಗುವಂತೆ ರೂ. 30.59 ಲಕ್ಷಗಳ ಬಾಕಿ ಇರುತ್ತದೆ.

ಇ) ವಿದ್ಯಾರ್ಥಿಗಳ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಮುಂದುವರಿಸಲಾಗಿದೆ.

ಈ) ಇಲ್ಲ.

## ಅನುಬಂಧ – 'ಎ'

| ಕ್ರ. ಸಂ. | ಖಾಸಗಿ ಮೆಡಿಕಲ್ ಕಾಲೇಜುಗಳ ಹೆಸರು | ಸರ್ಕಾರಿ ಆಸ್ಪತ್ರೆಗಳ ವಿವರ – ಇಲ್ಲಿ ಖಾಸಗಿ ಮೆಡಿಕಲ್ ಕಾಲೇಜುಗಳವರು ಕ್ಲಿನಿಕಲ್ ಸೌಲಭ್ಯ ಪಡೆಯುತ್ತಿರುವ ವಿವರ |
|---|---|---|
| 1. | ಕಸ್ತೂರಬಾ ಮೆಡಿಕಲ್ ಕಾಲೇಜು, ಮಂಗಳೂರು | – 1. ಜಿಲ್ಲಾ ಆಸ್ಪತ್ರೆ, ಮಂಗಳೂರು<br>2. ಲೇಡಿ ಗೋಪನ್ ಆಸ್ಪತ್ರೆ, ಮಂಗಳೂರು.<br>– 3 ಟಿ.ಬಿ. ಆಸ್ಪತ್ರೆ ಮೂಡಶೆಡ್ಡೆ |
| 2. | ಎಂ.ಆರ್. ಮೆಡಿಕಲ್ ಕಾಲೇಜು, ಗುಲ್ಬರ್ಗಾ | ಜಿಲ್ಲಾ ಆಸ್ಪತ್ರೆಗಳು ಗುಲ್ಬರ್ಗಾ |
| 3. | ಜೆ.ಎನ್. ಮೆಡಿಕಲ್ ಕಾಲೇಜು, ಬೆಳಗಾಂ | – 1. ಜಿಲ್ಲಾ ಆಸ್ಪತ್ರೆ, ಬೆಳಗಾಂ |
| 4. | ಜೆ.ಜೆ.ಎಂ. ಮೆಡಿಕಲ್ ಕಾಲೇಜು, ದಾವಣಗೆರೆ | – 1. ಜಿಲ್ಲಾ ಆಸ್ಪತ್ರೆ, ದಾವಣಗೆರೆ 2. ಹೆಂಗಸರು ಮತ್ತು ಮಕ್ಕಳ ಆಸ್ಪತ್ರೆ, ದಾವಣಗೆರೆ, 3. ಟಿ.ಬಿ. ಆಸ್ಪತ್ರೆ, ದಾವಣಗೆರೆ |
| 5. | ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಂಗಳೂರು | – 1. ಜಯನಗರ ಜನರಲ್ ಆಸ್ಪತ್ರೆ, ಬೆಂಗಳೂರು |
| 6. | ಆಲ್‌ಅಮೀನ್ ಮೆಡಿಕಲ್ ಕಾಲೇಜು, ಬಿಜಾಪುರ | – 1. ಜನರಲ್ ಆಸ್ಪತ್ರೆ, ಬಿಜಾಪುರ. |
| 7. | ಜೆ.ಎಸ್.ಎಸ್. ಮೆಡಿಕಲ್ ಕಾಲೇಜು, ಮೈಸೂರು | – 1. ಪಿ.ಕೆ.ಟಿ.ಬಿ. ಆಸ್ಪತ್ರೆ, ಮೈಸೂರು. |
| 8. | ಶ್ರೀ ಸಿದ್ಧಾರ್ಥ ಮೆಡಿಕಲ್ ಕಾಲೇಜು, ತುಮಕೂರು | – 1. ಜಿಲ್ಲಾ ಆಸ್ಪತ್ರೆ, ತುಮಕೂರು |
| 9. | ಆದಿಚುಂಚನಗಿರಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳ್ಳೂರು | – 1. ಜಿಲ್ಲಾ ಆಸ್ಪತ್ರೆ, ಮಂಡ್ಯ |
| 10. | ಶ್ರೀ ದೇವರಾಜ ಅರಸ್ ವೈದ್ಯಕೀಯ ಕಾಲೇಜು, ಕೋಲಾರ | – 1. ಎಸ್.ಎನ್.ಆರ್. ಆಸ್ಪತ್ರೆ, ಕೋಲಾರ 2. ಸಿವಿಲ್ ಆಸ್ಪತ್ರೆ, ಕೋಲಾರ, 3. ಕೆ.ಎನ್.ಟಿ.ಬಿ. ಆಸ್ಪತ್ರೆ, ಕೋಲಾರ. |
| 11. | ಡಾ: ಅಂಬೇಡ್ಕರ್ ಮೆಡಿಕಲ್ ಕಾಲೇಜು, ಬೆಂಗಳೂರು | – 1. ಕೆ.ಸಿ.ಜಿ. ಆಸ್ಪತ್ರೆ, ಬೆಂಗಳೂರು. |

### ರಾಜ್ಯದಲ್ಲಿರುವ ಪಶು ಚಿಕಿತ್ಸಾಲಯಗಳ ವಿವರ

**2098:** ಶ್ರೀ. ಎಂ.ಕೆ. ಪಟ್ಟಣ ಶೆಟ್ಟಿ (ಬಾದಾಮಿ):–

ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?